(ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರಿ. ಎ. ಲಕ್ಷ್ಮೀಸಾಗರ್.— "೧೯೮೭ನೇ ಇಸವಿಯ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸಬುಗಳು ಮತ್ತು ಉದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ"

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.—

"೧೯೮೭ನೇ ಇಸವಿಯ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸಬುಗಳು ಮತ್ತು ಉದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

೧೯೮೭ನೇ ಇಸವಿಯ ಸ್ಥಳೀಯ ಪ್ರದೇಶಗಳಿಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ಎರಡನೆಯ ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ. ಎ. ಲಕ್ಷ್ಮೀಸಾಗರ್.— ೧೯೮೭ನೇ ಇಸವಿಯ ಸ್ಥಳೀಯ ಪ್ರದೇಶಗಳಿಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ ಎರಡನೆಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ. ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೇ ೧೯೮೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶಗಳೊಳಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ವಿಧಿಸುವ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಹೇಳುತ್ತಾ, ಮಾನ್ಯ ಅಧ್ಯಕ್ಷರೇ ಈಗಾಗಲೇ ಇದರ ಬಗ್ಗೆ ಚರ್ಚೆಯಾಗಿದೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ ಪ್ರವೇಶ ತೆರಿಗೆ ಶೇಕಡಾ ೨ ರಿಂದ ಶೇಕಡಾ ೫ಕ್ಕೆ ಹೆಚ್ಚಿಸತಕ್ಕಂಥ ವಿಚಾರ ಪ್ರಸ್ತಾಪವಾಗಿದೆ. ಇದರ ಬಗ್ಗೆ ವ್ಯಾಪಾರಸ್ಥರಲ್ಲಿ ಇರತಕ್ಕಂಥ ತಪ್ಪು ಕಲ್ಪನೆಯ ಬಗ್ಗೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಮೂಲಭೂತವಾಗಿ ಇಟ್ಟಿರತಕ್ಕಂಥ ವಿಚಾರ ಮಾನ್ಯ ರಾಷ್ಟ್ರಪತಿಯವರ ಒಪ್ಪಿಗೆಗೂ ಹೋಗಬೇಕು ಎನ್ನುವ ವಿಚಾರವನ್ನು ತಮ್ಮಲ್ಲಿ ಹೇಳ್ವುದಕ್ಕೆ ಇಚ್ಛಿಸುತ್ತೇನೆ. ಹಾಗೂ ಮಾನ್ಯ ಸದಸ್ಯರು ಇದಕ್ಕೆ ಬೆಂಬಲ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಮಂಡಿಸಿರತಕ್ಕಂಥ ಈ ಒಂದು ವಿಧೇಯಕದ ಬಗ್ಗೆ ಹೇಳತಕ್ಕಂಥದ್ದು ಇಷ್ಟೇ. ಹಿಂದೆ ಆಕ್ಟ್ರಾಯ್ ಎನ್ನತಕ್ಕಂಥ ಒಂದು ತೆರಿಗೆ ಇದ್ದು, ಇದು ಹಳೆಯಕಾಲದ ಪದ್ಧತಿಯಾಗಿತ್ತು. ಇದನ್ನು ತೆಗೆಯಬೇಕು ಎನ್ನುವ ದೃಷ್ಟಿಯಿಂದ ೧೯೭೯ರಲ್ಲಿ ಎಂದರೆ ಎಂಟ್ರಿ ಟ್ಯಾಕ್ಸ್ ಆಕ್ಟ್ ಪಾಸಾಗಿ ಆಕ್ಟ್ರಾಯ್ ಪದ್ಧತಿಯನ್ನು ಹೊಗಲಾಡಿಸುವ ವಿಚಾರ ಬಂತು. ಮತ್ತೆ ಈ ರೀತಿಯಾಗಿ ವಸೂಲಾದ ಆಕ್ಟ್ರಾಯಿ ಬಹಳ ದೊಡ್ಡ ಪ್ರಮಾಣದಲ್ಲಿ ಸೋರಿ ಹೋಗಲಿಕ್ಕೆ ಏನು ಕಾರಣ ಎನ್ನುವ ಬಗ್ಗೆ ದೊಡ್ಡ ಚರಿತ್ರೆಯಾಗಿ ಮಾರ್ಪಾಡಾಯಿತು. ಇದು ನಾನು ನಮ್ಮ ರಾಜ್ಯಕ್ಕೆ ಸೀಮಿತಗೊಳಿಸಿ ಮಾತನಾಡುವುದಲ್ಲ ಇದರ ಬಗ್ಗೆ ಚರ್ಚೆ ಮಾಡಬೇಕಾದರೆ ನಮ್ಮ ದೇಶದಲ್ಲಿ ಯಾವಯಾವ ರಾಜ್ಯದಲ್ಲಿ ಈ ಆಕ್ಟ್ರಾಯ್ ತೆರಿಗೆಯನ್ನು ಜನತೆ ವಿರೋಧ ಮಾಡಿದರು, ಯಾವ ಯಾವ ಸರ್ಕಾರಗಳು ತೆಗೆದುಹಾಕಿದರು ಎನ್ನುವ ವಿಚಾರವೂ ಕೂಡ ಬಂದಿತು.

ಆಕ್ಟ್ರಾಯ್ ಎನ್ನುವ ತೆರಿಗೆಯನ್ನು ವಿಧಿಸಿದರೂ ಕೂಡ ಅದರಿಂದ ಆಲ್ಲಿಯಂ ಜನರ ಕಲ್ಯಾಣ ಕಾರ್ಯಕ್ರಮಗಳಿಗೋಸ್ಕರ, ಜನರ ಅಭಿವೃದ್ಧಿಯ ಕಾರ್ಯಕ್ರಮಗಳಿಗೋಸ್ಕರ ಹಣವನ್ನು ವಿನಿಯೋಗ ಮಾಡತಕ್ಕಂಥ ಉದ್ದೇಶದಿಂದ ತೆರಿಗೆಯನ್ನು ಹಾಕತಕ್ಕಂಥ ಒಂದು ರೀತಿಯನ್ನು ಇಟ್ಟುಕೊಳ್ಳಲಾಯಿತು. ಆದರೆ ಈ ಆಕ್ಟ್ರಾಯ್ ತೆರಿಗೆಯಿಂದ ಬರತಕ್ಕಂಥ ಹಣದ ಬಗ್ಗೆ ಎರಡು ವಿಚಾರಕ್ಕಾಗಿ ಇದನ್ನು ವಿರೋಧ ಮಾಡಿದ್ದು ಉಂಟು, ಒಂದು ಅನುಚಾನವಾಗಿ ಬಂದಿರತಕ್ಕಂಥ ಈ ಪದ್ಧತಿಯನ್ನು ತೆಗೆಯಬೇಕೆಂದು, ಜೊತೆಗೆ ಇದರಲ್ಲಿ ಆಕ್ಟ್ರಾಯ್ ಎಂದು ವಸೂಲು ಮಾಡತಕ್ಕಂಥ ಹಣ ಏನು ಇತ್ತು, ಇದು ಬಹಳವಾಗಿ ಸೋರಿ ಹೋಗುತ್ತದೆ. ಇದರಿಂದ ದೊಡ್ಡ ಮುನಿಸಿಪಾಲಿಟಿಗಳಿಗಾಗಲಿ, ಚಿಕ್ಕ ಮುನಿಸಿಪಾಲಿಟಿಗಳಿಗಾಗಲಿ ಅವುಗಳು ಭರಿಸಲಿಕ್ಕೆ ಸರಿಯಾದ ಉತ್ಪಾದನೆ ಬರುವುದಿಲ್ಲ, ಮತ್ತು ಇದರಿಂದ ಜನರಿಗೂ ಅನುಕೂಲವಾಗುವುದಿಲ್ಲ, ತೊಂದರೆಯಾಗುತ್ತದೆ ಎನ್ನುವ ವಿಚಾರ ಇದರಲ್ಲಿ ಬಂತು. ಆದಕ್ಕೋಸ್ಕರವಾಗಿ ಈ ಆಕ್ಟ್ರಾಯ್ ತೆರಿಗೆಯನ್ನು ತೆಗೆದು ನಾವು ಪ್ರವೇಶ ಅಂದರೆ ಯಾವುದೇ ವಸ್ತುಗಳು ಒಂದು ಪುರಸಭೆಯ ವ್ಯಾಪ್ತಿಯಲ್ಲಿ ಪ್ರವೇಶವಾಗಿ ಬರುತ್ತವೆ ಅದರ ಮೇಲೆ ತೆರಿಗೆಯನ್ನು ಹಾಕಿಬಿಡೋಣ ಎನ್ನುವ ಅಭಿಪ್ರಾಯ ಬಂದಿತು ಈ ಸಂದರ್ಭದಲ್ಲಿ ಮುನಿಸಿಪಾಲಿಟಿಗಳು ಏನು ಮಾಡಬೇಕು ಎನ್ನುವ ವಿಚಾರವೂ ಕೂಡ ಬಂದಿತು. ಆಕ್ಟ್ರಾಯ್ ಪದ್ಧತಿಯಿಂದ ಬರತಕ್ಕಂಥ ವರಮಾನ ಈ ಒಂದು ಪುರಸಭೆಗಳಿಗೆ ಕಡಿಮೆಯಾಗಿಬಿಡುತ್ತದೆಂದು, ತೆರಿಗೆ ಹಣವನ್ನು ಕೊಡತಕ್ಕಂಥದ್ದು ಪ್ರಶ್ನೆ ಬಂದು ಅಂದು ಪುರಸಭೆಯ ನೈರ್ಮಲ್ಯದ ಪ್ರಶ್ನೆ ಇರಬಹುದು, ಅಭಿವೃದ್ಧಿಯ ಕಾರ್ಯಕ್ರಮಗಳು ಇರಬಹುದು, ಮನೆಗಳನ್ನು ಕಟ್ಟಿಸಿಕೊಡತಕ್ಕಂಥದ್ದು ಇರಬಹುದು. ಇದಕ್ಕೆ ಹಣದ ಬಗ್ಗೆ ಏನು ಮಾಡಬೇಕು ಎನ್ನುವ ಪ್ರಶ್ನೆ ಬಂತು. ಕಾಂಗ್ರೆಸ್ ಪಕ್ಷದ ಸರ್ಕಾರ ಇದ್ದಾಗಲೇ ಇದನ್ನು ಜಾರಿಗೆ ತಂದಿರತಕ್ಕಂಥದ್ದು, ಇದು ಈಗಲೂ ಕೂಡ ನುಂದುವರಿದಿದೆ.

ಆಗ ಸರ್ಕಾರದ ಪರವಾಗಿ ಎಲ್ಲಾ ಪುರಸಭೆಗಳಿಗೂ ನೀವು ಧೈರ್ಯವಾಗಿರಿ, ಏನು ಯೋಚಿಸಬೇಕಾಗಿಲ್ಲ ಎಂದು ಹೇಳಿದರು. ಆಕ್ಟ್ರಾಯ್ ಪದ್ಧತಿಯನ್ನು ತೆಗೆದುಹಾಕಂವುದರಿಂದ ಹಣ ಉತ್ಪನ್ನದ ದೃಷ್ಟಿಯಿಂದ ಎಷ್ಟು ನಷ್ಟವಾಗುತ್ತದೆ ಆ ಹಣವನ್ನು ಪುರಸಭೆಗಳಿಗೆ ರಾಜ್ಯ ಸರ್ಕಾರದವರು ಬೇರೆ ರೀತಿಯಲ್ಲಿ ತುಂಬಿಕೊಡುತ್ತೇವೆಂದು ಹೇಳಲಾಯಿತು. ಎಂಟ್ರಿ ಟ್ಯಾಕ್ಸ್ ಆಕ್ಟ್ ಮೂಲಕ ಯಾವ ಯಾವ ವಸ್ತುಗಳಿಗೆ ತೆರಿಗೆ ಹಾಕಿ ವಸೂಲ್ಮಾಡುತ್ತಿದ್ದರೂ ಅದನ್ನು ಒಟ್ಟಿಗೆ ಕೊಡುತ್ತೇವೆಂದು ಹೇಳಲಾಯಿತು. ನಾವು ಮಂತ್ರಿಮಂಡಲದಲ್ಲಿದ್ದಾಗ ಪುರಸಭೆಗಳಿಗೆ ಕೊಡತಕ್ಕ ಹಣ ಕಡಿಮೆ, ಜಾಸ್ತಿ ಕೊಡಬೇಕಾಗುತ್ತದೆಂದು ಹೇಳಿದೆವು. ಆಕ್ಟ್ರಾಯ್ ಪದ್ಧತಿಯನ್ನು ರದ್ದುಗೊಳಿಸಿದ ಮೇಲೆ ಪುರಸಭೆಯ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಂವುದಕ್ಕೆ ಯಾರಿಗೂ ಸಾಧ್ಯವಾಗುತ್ತಿಲ್ಲ ಅಂದಾಗ ಜಾಸ್ತಿ ಹಣ ಕೊಡಬೇಕೆಂದು ಆಯಿತು. ಆ ಹಣ ಕೊಡತಕ್ಕ ವಿಚಾರದಲ್ಲಿ ವಿಮ್ಸ್ ಅಂಡ್ ಫ್ಯಾನ್ಸಿ ಪ್ರಕಾರ ತೀರ್ಮಾನವಾಯಿತು. ವರ್ಷಕ್ಕೆ ಇಂತಿಷ್ಟು ಮುನಿಸಿಪಾಲಿಟಿಗೆ ಚಿಕ್ಕದು, ದೊಡ್ಡದು ನೋಡಿಕೊಂಡು ಯಾವ ರೀತಿ ಹಣ ಕೊಡಬೇಕೆಂಬ ವಿಚಾರ ಬಂದಾಗ ಒಂದಕ್ಕೆ ೨೫ ಸಾವಿರ, ಮತ್ತೊಂದಕ್ಕೆ ೭೫ ಸಾವಿರ, ೨ ಲಕ್ಷ, ೩ ಲಕ್ಷ, ೫ ಲಕ್ಷ, ೧೦ ಲಕ್ಷ ಕೊಡುವುದೆಂಬ ವಿಚಾರ ಬಂತು. ಮುನಿಸಿಪಾಲಿಟಿಯ ಶಕ್ತಿ, ಸ್ವೈಜ ನೋಡಿಕೊಂಡು ಅಭಿವೃದ್ಧಿ ಕೆಲಸಕಾರ್ಯಗಳು ಏನಿರಂತ್ತವೆ ಅದರ ಆಧಾರದ ಮೇಲೆ ಹಣ ಕೊಡಬೇಕಾಗುತ್ತದೆ. ಅದಕ್ಕೆ ಯಾವುದೇ ಒಂದು ಅಳತೆಗೋಲು ಇದ್ದರೆ ಹಣ ಮಂಜೂರ್ಮಾಡಂವ ಅಭಿಪ್ರಾಯಕ್ಕೆ ಸರ್ಕಾರ ಬಂತು. ಇದರಿಂದ ಏನಾಯಿತೆಂದರೆ ತಮಗೆ ಬೇಕಾದ ಮುನಿಸಿಪಾಲಿಟಿಗೆ ಹಣ ಕೊಡುವುದು, ಬೇಡವಾಗುವುದಕ್ಕೆ ಹಣ ಕೊಡಬಾರದು ಎಂದು ತೀರ್ಮಾನ ಕೈಗೊಳ್ಳುವುದು, ಕೆಲವು ಪುರಸಭೆಗಳು ಆಡಳಿತ ಪಕ್ಷದ ಕಕ್ಷೆಯಲ್ಲಿವೆ. ಕೆಲವು ಕಾಂಗ್ರೆಸ್, ಬಿಜೆಪಿ, ಸಿಪಿಎಂ, ಹಾಗೂ ಸ್ವತಂತ್ರವಾಗಿ ಗೆದ್ದು ಬಂದಿರತಕ್ಕವರ ಪಾಲಿಗೆ ಇವೆ. ಅಲ್ಲಿಗೆ ಹಣ ಕೊಡಬೇಕಾದರೆ ಪಕ್ಷಪಾತ ಮಾಡಿತು ಸರ್ಕಾರ ಎಂದು ಕೇಳಿದ್ದೇವೆ. ಈಗ ನಾನು ಅದರ ವಿವರಕ್ಕೆ ಹೋಗುವುದಿಲ್ಲ. ಆಕ್ಟ್ರಾಯ್ ರದ್ದಾಗಿರಂವುದರಿಂದ ಇಲ್ಲಿ ಈ ರೀತಿ ಲಂಸಂ ಗ್ರಾಂಟ್ಸ್ ಕೊಡತಕ್ಕದು ಬಂತು, ಇದರಿಂದ ಬಹಳ ಅನ್ಯಾಯವಾಗಿದೆ. ಕೆಲವು ಮುನಿಸಿಪಾಲಿಟಿಗಳಂ ಕೆಲಸ ಕಾರ್ಯ ಮಾಡಿದವು. ಕೆಲವು ಕಡೆ ಕಸ ಗುಡಿಸಂವವರಿಗೆ ಸಹ ಸಂಬಳ ಕೊಡಂವುದಕ್ಕಾಗಲಿಲ್ಲ. ಉದಾಹರಣೆಗೆ ಸೊರಬದ ಮುನಿಸಿಪಾಲಿಟಿಯನ್ನು ತೆಗೆದುಕೊಳ್ಳಿ. ನಮ್ಮ ತಾಲ್ಲೂಕಿನಲ್ಲಿ ಇನ್ನೂ ಕೆಲವು ಚಿಕ್ಕ ಚಿಕ್ಕ ಮುನಿಸಿಪಾಲಿಟಿಗಳು ಇವೆ. ಈಗ ಆವೆಲ್ಲಾ ಪಂಂಡಲ ಪಂಚಾಯಿತಿ ಕಾನೂನು ಪ್ರಕಾರ ಪಂಂಡಲ ಪಂಚಾಯಿಂತಿಗಳಾಗಿವೆ. ಅನೇಕ ಮುನಿಸಿಪಾಲಿಟಿಗಳಲ್ಲಿ ಸಿಬ್ಬಂದಿಗೆ ಸಂಬಳ ಕೊಡಂವುದಕ್ಕಾಗದೆ ನರಳಂತಿರತಕ್ಕ ಪರಿಸ್ಥಿತಿ ಇದೆ. ಇದನ್ನೆಲ್ಲಾ ನೋಡಿ ಜನ ಏನು ಹೇಳುತ್ತಾರೆಂದರೆ ಆಕ್ಟ್ರಾಯಿ ಪದ್ಧತಿ ಇದ್ದಿದ್ದರೆ

ನೈರ್ಮಲ್ಯ ವ್ಯವಸ್ಥೆ. ಮಾಡುವುದಕ್ಕೆ, ಸಂಬಳ ಸಾರಿಗೆ ನೋಡಿಕೊಳ್ಳುವುದಕ್ಕೆ ಆದರೂ ಪುರಸಭೆಗಳಿಗೆ ಶಕ್ತಿ ಇರುತ್ತದೆ ಎಂದು. ಆಕ್ಟ್ರಾಯಿ ಪದ್ಧತಿಯನ್ನು ನಾನು ಈ ಸದನದಲ್ಲಿ ವಿರೋಧಿಸಿದ್ದೇನೆ. ಆದರ ಅರ್ಥ ಏನೆಂದರೆ, ಕೆಟ್ಟ ಪದ್ಧತಿಯನ್ನು ತೆಗೆದುಹಾಕಿ ಮತ್ತೊಂದು ಒಳ್ಳೆಯ ಪದ್ಧತಿಯನ್ನು ತಂದು ಮುನಿಸಿಪಾಲಿಟಿಗಳಲ್ಲಿ ಉತ್ಪನ್ನ ಇರುವ ಹಾಗೆ ಮಾಡಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಗಮನ ಕೊಡಬೇಕು ಎನ್ನುವುದು ಅದನ್ನು ನಾವು ನೀವು ಯಾರೂ ಮಾಡಿದರೂ ಅಷ್ಟೆ. ಆ ರೀತಿ ಮಾಡಬೇಕು. ಈಗ ಎಂಟ್ರಿ ಟ್ಯಾಕ್ಸ್‌ಆಕ್ಟ್ ಪ್ರಕಾರ ಯಾವ ಯಾವ ವಸ್ತುಗಳ ಮೇಲೆ ತೆರಿಗೆ ಹಾಕಬೇಕು ಮತ್ತು ಅದರಿಂದ ಬರತಕ್ಕ ಹಣವನ್ನು ಕೊಡಬೇಕೆಂದು ಇಟ್ಟುಕೊಂಡಿದ್ದಾರೆ ಅದು ಮಲ್ಟಿಪಾಯಿಂಟ್ ಟ್ಯಾಕ್ಸೆಸ್ ಆಗುವುದಕ್ಕೆ ಅವಕಾಶವಾಯಿತು. ಅದನ್ನು ಬಿಟ್ಟು ನಾವು ಸಿಂಗಲ್ ಪಾಯಿಂಟಿಗೆ ಹೋಗಬೇಕು. ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಪದ್ಧತಿ ತಂದರೆ ಸಿಂಪ್ಲಿಫೈ ಮಾಡಬೇಕು. ಯಾರು ಅಲ್ಲಿರತಕ್ಕೆ ವಸ್ತುಗಳನ್ನು ಉಪಯೋಗಿಸುತ್ತಾರೆ ಅವರಿಗೆ ಹೆಚ್ಚಿಗೆ ದರ ಬೀಳಬಾರದೆಂಬುದು ನಮ್ಮ ಉದ್ದೇಶ. ಅನೇಕ ಹಂತದಲ್ಲಿ ತೆರಿಗೆ ಜಾಸ್ತಿ ಆದಷ್ಟು ultimately that will be put on the head of the consumer only. ಯಾರು ಗ್ರಾಹಕ ಇದ್ದಾನೆ ಅವನ ತಲೆ ಮೇಲೆ ಇದು ನಿಲ್ಲುತ್ತದೆ. ಯಾವುದೇ ತೆರಿಗೆ ಹಾಕತಕ್ಕ ಪದ್ಧತಿಯನ್ನು ವಿಚಾರ ಮಾಡಿದರೆ ಈ ರೀತಿ ಅನ್ನಿಸುತ್ತದೆ. ಹೋಲ್‌ಸೇಲ್ ಮರ್ಚೆಂಟ್ಸ್ ಇರುತ್ತಾರೆ. ಕಮಿಷನ್ ಏಜೆಂಟ್ಸ್ ಇರುತ್ತಾರೆ. ಅನೇಕ ಹಂತದಲ್ಲಿ ಟರ್ನ್ ಓವರ್ ಟ್ಯಾಕ್ಸ್ ಬದಲಾವಣೆಗೆ ಒಳಪಡುತ್ತಿದೆ. ಟರ್ನ್ ಓವರ್ ಟ್ಯಾಕ್ಸ್ ಇರಬಹುದು, ಮತ್ತೊಂದು ರಬಹುದು, ಮಲ್ಟಿಪಾಯಿಂಟ್ ಸಿಸ್ಟಂ, ಸಿಂಗಲ್ ಪಾಯಿಂಟ್ ಸಿಸ್ಟಂ ಏನು ಮಾಡಿದರೂ ಕೂಡ ultimately, the merchant, just pass it on to the consumer only. ಎಲ್ಲರೂ ಗ್ರಾಹಕನ ತಲೆಯ ಮೇಲೆ ಹಾಕುತ್ತಾರೆ. ಆದಷ್ಟು ತೆರಿಗೆ ಹಂತಗಳನ್ನು ಕಡಿಮೆ ಮಾಡುವುದರಿಂದ as for as possible, the total tax on a particular item will ultimately go to the consumers head. ಆದಷ್ಟೂ ತೆರಿಗೆಯನ್ನು ಕಡಿಮೆ ಮಾಡುವ ವಿಚಾರವನ್ನು ಇಟ್ಟುಕೊಳ್ಳಬೇಕು. ೧೯೭೯ರಲ್ಲಿ ಎಂಟ್ರಿ ಟ್ಯಾಕ್ಸ್ ಆಕ್ಟ್ ತಂದಾಗ ಮೂರು ಐಟಂಗಳು ಇತ್ತು. ಟೆಕ್ಸ್‌ಟೈಲ್, ಟೊಬಾಕೋ, ಷುಗರ್ ಈ ಮೂರರ ಮೇಲೆ ಟ್ಯಾಕ್ಸ್ ಹಾಕಿದರೆ ಸಾಕಷ್ಟುನರಮಾನ ಬರುತ್ತದೆ ಎಂಬ ಭಾವನೆ ಇತ್ತು. ಬಟ್ಟೆ ಬರೆಗಳ ಮೇಲೆ, ತಂಬಾಕಿನ ಮೇಲೆ ಮತ್ತು ಸಕ್ಕರೆ ಮೇಲೆ ಈ ಮೂರು ಐಟಂಗಳ ಮೇಲೆ ಹಾಕುವುದರಿಂದ ನಮ್ಮ ಬೊಕ್ಕಸಕ್ಕೆ ಎಷ್ಟು ಹಣ ಬರಬೇಕೋ ಅಷ್ಟು ಬರುವುದಿಲ್ಲ ಎಂಬ ಅಭಿಪ್ರಾಯವೂ ಬಂದಾಗ ಇರತಕ್ಕ ಷೆಡ್ಯೂಲ್‌ಗೆ ಜಾಸ್ತಿ ಐಟಂ ಸೇರಿಸೋಣ ಎಂಬ ಅಭಿಪ್ರಾಯ ಬಂದು ಅನೇಕ ಐಟಂಗಳನ್ನು ಸೇರಿಸಿ ಅದರ ಮೇಲೆ ತೆರಿಗೆ ಹಾಕತಕ್ಕ ಪದ್ಧತಿ ಬಂತು. ಈಗ ಈ ಹಣವೂ ಸಾಲದು ಎಂಬ ಭಾವನೆ ಬಂದಿದೆ. ಈ ಸೆಕ್ಷನ್‌ನಲ್ಲಿ ಷೆಡ್ಯೂಲ್‌ಗೆ ಸೇರಿಸಿರುವ ಲಿಸ್ಟ್ ಆಫ್ ಐಟಂ ನೋಡಿದರೆ ಗೊತ್ತಾಗುತ್ತದೆ. ಕೆಲವು ಐಟಂಗಳನ್ನು ಕೈಬಿಡತಕ್ಕದ್ದು ಕೂಡ ಇರಬಹುದು ಕೆಲವು ಐಟಂಗಳನ್ನು ಸೇರಿಸುವುದರಿಂದ ಬಡವರಿಗೆ ತೊಂದರೆಯಾಗುತ್ತದೆ ಎಂದು ಬಿಡತಕ್ಕ ಪ್ರೊಪೋಸಲ್ ಕೂಡ ಈ ಅಮೆಂಡ್‌ಮೆಂಟ್‌ನಲ್ಲಿ ಬರುತ್ತದೆ. ಇನ್ನು ಕೆಲವು ಸೇರಿಸತಕ್ಕದ್ದು ಇದೆ. ಈ ರೀತಿ ಐಟಂಗಳನ್ನು ಸೇರಿಸುವಾಗ ಎಚ್ಚರಿಕೆ ವಹಿಸಬೇಕು. ಸರ್ಕಾರಿ ಮಟ್ಟದಲ್ಲಿ ಇದನ್ನು ಚರ್ಚೆ ಮಾಡಬೇಕು. ಕೇವಲ ಅಧಿಕಾರಿಗಳಿಗೇ ಬಿಡಬಾರದು. ಅಧಿಕಾರಿಗಳು ವರಮಾನದ ದೃಷ್ಟಿಯಿಂದ ವಿಚಾರಮಾಡಿದರೂ ಜನಸಾಮಾನ್ಯರಿಗೆ ಪೆಟ್ಟಾಗದಂತೆ ವಿಚಾರ ಮಾಡುವವರು ರಾಜಕಾರಣಿಗಳು. ನಮ್ಮ ಪಕ್ಷ ಇರಬಹುದು. ನಿಮ್ಮ ಪಕ್ಷ ಇರಬಹುದು. ಜನ ಬಂದು ಆರ್ಜಿ ಕೊಡುತ್ತಾರೆ. ಈ ತರಹ ಅನ್ಯಾಯವಾಗಿದೆ ಎಂದು ಹೇಳುತ್ತಾರೆ. ತಿನ್ನತಕ್ಕ ವಸ್ತು ತೊಗರಿಬೇಳೆ ಇರಬಹುದು, ಬಡವ ಹಾಕಿಕೊಳ್ಳತಕ್ಕ ಸಾಧಾರಣದರ್ಜಿಯಬಟ್ಟೆಬರೆ ಇರಬಹುದು,ಅದರ ಮೇಲೆತೆರಿಗೆ ಹಾಕಿದರೆ ನಮಗೆ ಅನ್ಯಾಯವಾಗುತ್ತದೆ, ದಯವಾಮಾಡಿ ತೆಗೆಯಬೇಕು ಎಂದು ಹೇಳುತ್ತಾರೆ. ನಾನು ಅಧಿಕಾರಿಗಳು ಕೆಟ್ಟವರು ಎಂದು ಹೇಳುವುದಿಲ್ಲ. ಅವರು ವರಮಾನ ಕಡಿಮೇ ಎಂದು ವಿಚಾರ ಮಾಡುತ್ತಾರೆ. ಉತ್ಪನ್ನ ಜಾಸ್ತಿ ಮಾಡಿದರೆ ಪುರಸಭೆಗಳಿಗೆ ಒಳ್ಳೆಯದು ಎಂಬ ಭಾವನೆ ಅಧಿಕಾರಿಗಳಿಗೆ ಬಂದಿರುವುದರಿಂದ ಅವರು ಹೇಳುತ್ತಾರೆ. ಆದರೆ ಅದರಿಂದಾಗುವ ಪೆಟ್ಟಿನ ಕಹಿ ಅನುಭವ ಜನರಿಗಾಗಿ ಅವರು ನೇರವಾಗಿ ರಾಜಕಾರಣಿ ಹತ್ತಿರ ಬರುತ್ತಾರೆ. ಇದು ನನ್ನ ಅಭಿಪ್ರಾಯ. ಏಕೆಂದರೆ ಜನರಿಗೆ ನಮ್ಮ ಸಂಪರ್ಕ ಜಾಸ್ತಿ ಇರುತ್ತದೆ, ಪಬ್ಲಿಕ್ ಲೈಫ್‌ನಲ್ಲಿ ಯಾರಿರುತ್ತಾರೆ ಅವರಿಗೆ ಜನರ ನಿಕಟ ಸಂಪರ್ಕ ಇರುತ್ತದೆ. ಆದ್ದರಿಂದ ಜನ ಆರ್ಜಿ ಮುಖಾಂತರ

ಅಥವಾ ಬಾಯಿ ಮಾತಿನಲ್ಲಿ ನಮಗೆ ತಿಳಿಸುತ್ತಾರೆ. ಆ ದೃಷ್ಟಿಯಿಂದ ಐಟಂಗಳನ್ನು ಪೆಡ್ಯೂಲ್‌ಗೆ ಸೇರಿಸುವಾಗ ಗಮನದಲ್ಲಿಟ್ಟುಕೊಳ್ಳಬೇಕು. ಯಾವುದು ಸೇರಿಸಬೇಕು. ಯಾವುದು ಸೇರಿಸಬಾರದು ಎಂಬ ಪ್ರಜ್ಞೆ ಇಟ್ಟುಕೊಂಡು ಎಚ್ಚರಿಕೆಯಿಂದ ಸರ್ಕಾರ ಕಾರ್ಯನಿರ್ವಹಣೆ ಮಾಡಬೇಕಾಗುತ್ತದೆ. ಎರಡು ವಿಚಾರವನ್ನು ಇಟ್ಟುಕೊಂಡಿದ್ದಾರೆ ಇದರಲ್ಲಿ ಪಟ್ಟಿಗೆ ಹೆಚ್ಚಿಗೆ ಐಟಂಗಳನ್ನು ಸೇರಿಸುವುದಕ್ಕೆ ಸರ್ಕಾರಕ್ಕೆ ಅಧಿಕಾರ ಬರುತ್ತಿದೆ. ಮತ್ತು ಮಲ್ಟಿಪಾಯಿಂಟ್‌ನಿಂದ ಸಿಂಗಲ್ ಪಾಯಿಂಟ್‌ಗೆ ನಿಲ್ಲಿಸತಕ್ಕ ಅವಕಾಶವೂ ಇದೆ. ಈ ಎರಡು ಉದ್ದೇಶ ಇಟ್ಟುಕೊಂಡಿದ್ದಾರೆ ಇದರಲ್ಲಿ. ನಾನು ಈ ಪಟ್ಟಿ ಓದುವುದಿಲ್ಲ. ಏಕೆಂದ ಅದಂ ಬಹಳ ಜಾಸ್ತಿ ಇದೆ. ಕೆಲವು ಸಾರಿ ಏನಾಗುತ್ತದೆ ಎಂದರೆ ಕೆಲವು ಚಿಕ್ಕ ಚಿಕ್ಕ ವ್ಯಾಪಾರಸ್ಥರು ವ್ಯಾಪಾರ ಮಾಡುತ್ತಾರೆ.

SRI BLASIUS D'SOUZA (Mangalore).—Mr, Speaker, Sir, there is a lot of talk about Octroi compensation in lieu of abolition Octroi. I would say that the Government has already taxed in various ways—surcharge on Sales Tax, Entry Tax, Turnover Tax, Surcharge on Electricity and this amounts to more than Rs. 150 Crores. In lieu of Octroi, in 1985-86, the turnover tax was Rs. 30 Crores and in 1986-76, it was Rs. 35 Crores. The entry tax is about Rs. 40 Crores or so they have received. As I said, they get Sales Tax of Rs. 694 Crores and 10. surcharge comes to Rs. 69 Crores. Whenever we speak of Octroi, the Hon'ble Minister prof. Lakshmisagar always used to say that we are giving sufficient aid to municipalliss. He just now said about the profession of Tax and a portion which was given to the Corporations and Municipalities but I would say that it has an old history. You have been telling about the the injustice done by the Centre to the States and here, we have to say that you are doing injustice to the Municipalities and Corporations in the matter of giving its due share. Therefore, I would request the Hon'ble Chief Minister to have a Commission to see how the grants are given to the Corporations and Municipalities. If Corporations and Municipalities are not working well, it is only because the Government is not giving their right share. I don't say that the Government should give any share out of all taxes, but the it should give the share where they lived the particular tax from the people stating that it is levied in lieu of Octroi. To-day, in the Statement of Objects and Reasons, you have stated that Entry Tax has been brought in place of Octroi and the Entry Tax which was started at ½% and 1%, has been increased ta 2% and it is proposed to give a free hand to the Government to levy from 2 to 5%. Whenever we ask the Government to give its due share to Corporations and Municipalities, the Hon'ble Minister prof. Lakshmisagar used to say that we are giving proper share of Profession of Tax and all that, but, the fact is that it has not been given to the Corporations and Municipalities. He went on saying that there is a history. Sir If the Corporations and Municipalities don't get their due share, they have no other alternative but to fight- to get their proper share.

As regards Entry Tax, I would say that when we levied Octroi, those who worked in Corporations and Municipalities are aware, the maximum tax to be levied was 2% and we used to levy ½% to 1% but to-day the turnover tax has gone up to 1½%, and the entry tax has gone to 2%. Now the Government is asking us to give them a free hand to tax any item i.e., to tax from 2% to 5%. We cannot give this power to the Government. Any taxes to be levied should come before the House. and the House should do it. The House can discuss over it and pass it and that is the correct procedure. We know they have got a brute majority on a result whatever we suggest they are not prepared to hear and they ard prepared to hear from delegations from here and there, but, they are not prepared to hear the Opposition. They want to bulldoz the Opposition.

I request the hon. Minister to see that this tax is taken back and as the previous speaker said, in the Manifesto they had said that they will abolish the profession tax and they always say, 'we do whatever we speak''. But unfortunately, this tax has not been abolished and if whatever collection has been done, I request prof. Lakshmisagar if whatever help he wants from us to strengthen his hands against the Government, we will help his to see that, this tax will go to the municipalities or the corporations and not for other purposes.

I would say, this is going to give powers to the Government to enhance the percent of tax from 2 to 5%. We are really killing the people of Kanataka. Our people are highly taxed. Not that I am against taxation, let them legitimately tax. But let them be able to bear the taxation imposed by the Government. Afterall, these taxes have to be paid by the people and not by the business community, finally it is transferred to the poor people. Therefore, I request the Government not to enhance it from 2% to 5%, let it remain at 2% only. It is against the financial policy or even it might be against the Constitution also to take powers and do whatever they like Presently 2% is more than enough and therefore, I request the Government to restrict their power to 2% and it must be the maximum. No item was charged more than 2% in any corporation or in any city Corporations. I would once again request the Minister through the Speaker to withdraw this levy of tax from 2% to 5% and also to with-draw the option of choosing any item.

ಶ್ರೀ. ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಹಾಗೂ ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಮಂತ್ರಿಗಳು).--ಮಾನ್ಯ ಅಧ್ಯಕ್ಷರೇ, ಈಗಾಗಲೇ ಸನ್ಮಾನ್ಯ ಡಿಸೌಜಾ ಅವರು ಹೇಳಿದ ಮಾತುಗಳಿಗೆ ಪ್ರಾರಂಭ ಪ್ರಸ್ತಾಪದಲ್ಲಿಯೇ ಹೇಳಿದ್ದೇನೆ. ಮತ್ತೆ ಅದನ್ನು ಪುನರುಚ್ಚಾರ ಮಾಡತಕ್ಕ ಅವಶ್ಯಕತೆ ಇಲ್ಲವೆಂದು ಭಾವಿಸುತ್ತೇನೆ. ಎರಡನೆಯದಾಗಿ, ಮಾನ್ಯ ಬಂಗಾರಪ್ಪನವರು ಮತ್ತು ಡಿಸೌಜ ಅವರು ಕೂಡಾ ಆಕ್ಷೇಪಣೆ ಹೋದ ನಂತರ ಸ್ಥಳೀಯ

ಸಂಸ್ಥೆಗಳಲ್ಲಿ ಉಂಟಾಗಿರತಕ್ಕ ಹಣಕಾಸಿನ ದುಸ್ಥಿತಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನವಂಗೆ ಈ ಪ್ರವೇಶ ತೆರಿಗೆಯಿಂದ ೧೯೮೬-೮೭ರಲ್ಲಿ ೩೦ ಕೋಟಿ ರೂಪಾಯಿ ಬರುವ ನಿರೀಕ್ಷೆ ಇತ್ತು ಆ ಪ್ರಕಾರ ೮೭ರ ಡಿಸೆಂಬರ್ ಹೊತ್ತಿಗೆ ೨೦.೨೩ ಕೋಟಿ ರೂಪಾಯಿ ವಸೂಲಿ ಆಗಿದೆ. ಮಿಕ್ಕ ಹಣ ಕೂಡಾ ಈ ವರ್ಷ ಮುಂಗಿಯುವುದರೊಳಗೆ, ಆರ್ಥಿಕ ವರ್ಷ ಮುಂಗಿಯುವುದರೊಳಗೆ ವಸೂಲಾಗುತ್ತದೆನ್ನುವ ಭರವಸೆ ಇದೆ. ಆಕ್ಟ್ರಾಯ್ ತೆಗೆದಮೇಲೆ ಕೆಲವು ಸ್ಥಳೀಯ ಸಂಸ್ಥೆಗಳಿಗೆ ತೊಂದರೆ ಆಗಿದೆ ಎಂಬುದನ್ನು ಪ್ರಸ್ತಾಪ ಮಾಡಿದ್ದಾರೆ ಈ ಮಾತು ಭಾಗಶಃ ನಿಜ ಎಂದು ಎನಿಸುತ್ತದೆ. ದೇಶದಲ್ಲಿ ಈ ಆಕ್ಟ್ರಾಯ್ ಹೋಗಬೇಕೆಂದು ೧೯೫೫ನೇ ಇಸವಿಯಲ್ಲಿಯೇ ಟ್ರಿವಿಲಿಯನ್ ಎನ್ನುವವರೊಬ್ಬರು ವರದಿ ಕೊಟ್ಟಿದ್ದರು. ಆಗಿನ ಕಾಲದಲ್ಲೇ ಆಕ್ಟ್ರಾಯ್ ಹೋಗಬೇಕು ಎಂದು ದೇಶದಲ್ಲಿ ಹಲವಾರು ಸಲ ವಿಶ್ಲೇಷಣೆ, ಮಾತುಕತೆ ನಡೆದು ಹಿಂದೆ ಇದ್ದ ಸರ್ಕಾರ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿತು. ಸನ್ಮಾನ್ಯ ಬಸವಲಿಂಗಪ್ಪನವರು ಅದಕ್ಕೆ ಭಾಗಿಗಳು. ಈಗ ಅವರಿಗೆ ಆ ಬಗ್ಗೆ ಮನವರಿಕೆಯಾಗಿದೆ. ಈಗೆ ಮತ್ತೆ ಆಕ್ಟ್ರಾಯ್ ತರುವುದರಿಂದ ಎಲ್ಲರಿಗೂ ಅನುಕೂಲವಾಗುತ್ತದೆನ್ನುವ ತಪ್ಪು ಕಲ್ಪನೆ ಇದೆ. ಬರೀ ಕೆಲವೇ ನಗರಗಳಿಗೆ ಅದರಿಂದ ಅನುಕೂಲ ಇದೆ. ಎಲ್ಲಿ ವ್ಯಾಪಾರ ಚೆನ್ನಾಗಿ ಇದೆ, ಎಲ್ಲಿ ಕಾಮರ್ಸ್ ಇದೆ, ಎಲ್ಲಿ ಗೂಡ್ಸ್ ಮೂವ್‌ಮೆಂಟ್ ಇದೆ ಅಂತಹ ನಗರಗಳಿಗೆ ಅನುಕೂಲ ಆಗುತ್ತದೆಯೇ ಹೊರತು ಎಲ್ಲಾ ನಗರಗಳಿಗೂ ಅನುಕೂಲವಾಗುವುದಿಲ್ಲ.

SRI BLACIOUS M. D'SOUZA.—We too are against octori.

Sri. A. LAKSHMISAGAR.— I met your point already in my speech. ಸುಮಾರು ೧೫-೨೦ ವರ್ಷಗಳಿಂದ ಅನೇಕ ಮುನಿಸಿಪಾಲಿಟಿಗಳಲ್ಲಿ ತೆರಿಗೆ ಪರಿಷ್ಕರಣ ಮಾಡಿಲ್ಲ. ೧೫ ವರ್ಷಗಳ ಹಿಂದೆ ಏನು ತೆರಿಗೆಯನ್ನು ಕೊಡುತ್ತಿದ್ದರೋ ಇವತ್ತೂ ಅದನ್ನೇ ಕೊಡತ್ತಿದ್ದಾರೆ. ನಂತರ ತೆರಿಗೆ ವಸೂಲಿ ಯಾವರೀತಿ ನಡೆದಿದೆ ? ಕೆಲವೊಂದು ಕಡೆ ಶೇಕಡ ೫೦ ರಷ್ಟು ವಸೂಲಿ ಮಾಡಿದ್ದಾರೆ. ೪೦ ಕೋಟಿ ರೂಪಾಯಿಯಲ್ಲಿ ಕೇವಲ ೨೦ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ. ಕೇವಲ ೪೫-೪೭ ಮುನಿಸಿಪಾಲಿಟಿಗಳಲ್ಲಿ ಸಂಬಳ ಕೊಡುವುದಕ್ಕೆ ಹಣ ಇಲ್ಲ. ಇದು ಪರಿಸ್ಥಿತಿ ಇದೆ. ತೆರಿಗೆ ಪರಿಷ್ಕರಣ ಇಲ್ಲ. ಇರತಕ್ಕ ತೆರಿಗೆಯನ್ನು ಪರಿಣಾಮಕಾರಿಯಾಗಿ ವಸೂಲಿ ಮಾಡುತ್ತಾ ಇಲ್ಲ, ಆಕ್ಟ್ರಾಯ್ ತಂದರೆ ಎಲ್ಲಾ ನಗರಗಳಿಗೆ ಉಪಯೋಗ ಆಗುವುದಿಲ್ಲ. ಇವೆಲ್ಲಾ ವಿಷಯಗಳು ಅಡಕವಾಗಿವೆ. ಸರ್ವೇ ಸಾಮಾನ್ಯವಾಗಿ ಆಕ್ಟ್ರಾಯ್ ಬಂದರೆ ಬೆಂಗಳೂರು ನಗರಕ್ಕೆ ಮಾತ್ರ ಅನುಕೂಲವಾಗಂತ್ತದೆ. ರಾಜ್ಯದ ನಗರ ಪ್ರದೇಶಗಳ ಜನರ ಭವಿಷ್ಯವನ್ನು ಗಮನದಲ್ಲಿಟ್ಟು ಕೊಂಡು ಯಾವ ತೆರಿಗೆಯನ್ನು ಎಷ್ಟನ್ನು ಹಾಕಿದರೆ ಅನುಕೂಲವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಂತ್ತದೆ. ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಪ್ರಸ್ತಾಪ ಮಾಡುತ್ತಾ, ಸರಕು ಸಾಗಾಣಿಕ ವಿಚಾರದಲ್ಲಿ ತೊಂದರೆ ಬರುತ್ತದೆ, ಆಡ್ಡಿ ಬರುತ್ತದೆ ಸಾಮಾನು ಸಾಗಾಣಿಕೆಗೆ ಆಗುವುದರಲ್ಲಿ ನಿಧಾನವಾಗುತ್ತದೆ ಎನ್ನುವ ಮಾತನ್ನು ಗಮನದಲ್ಲಿಟ್ಟು ಆ ಮಾತನ್ನು ಆಡಿದ್ದಾರೆ. ಕೇಂದ್ರ ಸರ್ಕಾರ ಕೂಡ ಈ ಬಗ್ಗೆ ಯೋಚನೆ ಮಾಡಿದೆ. ಕಾಂಗ್ರೆಸ್ (ಐ) ಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿಯೂ ಸಹ ಆಕ್ಟ್ರಾಯಿಯನ್ನು ತೆಗೆಯಬೇಕೆಂದು ಅವರು ತೀರ್ಮಾನ ತೆಗೆದುಕೊಳ್ಳುವ ವಿಚಾರದಲ್ಲಿದ್ದಾರೆ. ಆದ್ದರಿಂದ ಪ್ರವೇಶ ತೆರಿಗೆಯನ್ನು ವಿಸ್ತರಣೆ ಮಾಡತಕ್ಕ ವಿಷಯದಲ್ಲಿ ಇರಲಿ, ಅಥವಾ ಬೇರೆ ತೆರಿಗೆ ಹಾಕಿ ಹೆಚ್ಚು ಉತ್ಪಾದನೆ ತೆಗೆದುಕೊಳ್ಳತಕ್ಕಂಥ ಒಂದು ಪ್ರಸ್ತಾಪವಿದೆ ಈಗ ಮಂಡಲ ಪಂಚಾಯತಿಗಳು ಬಂದಿವೆ, ಜಿಲ್ಲಾ ಪರಿಷತ್‌ಗಳು ಬಂದಿವೆ ಅವರು ಹೆಚ್ಚು ಹಣವನ್ನು ಕೇಳುತ್ತಾರೆ ಅದನ್ನು ಗಮನದಲ್ಲಿಟ್ಟು ಮಾನ್ಯ ಸದಸ್ಯರುಗಳು ಈ ಬೇಡಿಕೆಗೆ ಮನ್ನಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ, ೧೯೮೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶಗಳಿಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ವಿಧಿಸುವ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ರಿಂದ ೧೫ರ ವರೆಗೆ

ಅಧ್ಯಕ್ಷರು.—''ಖಂಡ ೨ ರಿಂದ ೧೫ರ ವರೆಗೆ ಈ ವಿಧೇಯಕದ ಅಂಗವಾಗಿರಂತ್ತವೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೧೫ರ ವರೆಗಿನ ಖಂಡಗಳು ಈ ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಖಂಡ–೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.....

''ಮೊದಲನೆಯ ಖಂಡ ದೀರ್ಘ ಶೀರ್ಷಿಕೆಯ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಯು ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆಯ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂವಿಧೆಯು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—೧೯೮೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶಗಳಿಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.....

೧೯೮೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶಗಳಿಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದಂತೆ ಅಂಗೀಕರಿಸಲ್ಪಟ್ಟಿತು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಮನವಿ

ಕೋರಮಂಗಲದಲ್ಲಿ ಒಂದು ಸಾವಿರ ಬಡವರ ಮನೆಗಳು ಸುಟ್ಟು ಹೋಗಿರುವುದು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮತ್ತೊಂದು ತಿದ್ದುಪಡಿ ಮಸೂದೆಯನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ, ನಿನ್ನೆ ಬೆಂಗಳೂರು ನಗರದಲ್ಲಿ ಒಂದು ದೊಡ್ಡ ಅನಾಹುತವಾಗಿದೆ. ಕೋರಮಂಗಲದಲ್ಲಿ ೧ ಸಾವಿರ ಬಡ ಜನರ ಮನೆಗಳು ಸುಟ್ಟುಹೋಗಿವೆ. ಇವತ್ತು ಕೆಲವರು ಅಲ್ಲಿಗೆ ಹೋಗಿ ಬಂದಿದ್ದಾರೆ. ವಿಶೇಷವಾಗಿ ಬದುಕಲಿಕ್ಕೋಸ್ಕರವಾಗಿ ಉತ್ತರ ಕರ್ನಾಟಕದಿಂದ ಕೂಲಿ ಕೆಲಸಕ್ಕಾಗಿ ಬಂದಂತಹ ಹೆಚ್ಚಿನ ಜನರು ಇದ್ದಾರೆ. ಬೇರೆ ಕಡೆಗಳಲ್ಲಿ ಕೆಲಸ ಮಾಡತಕ್ಕವರು ಮನೆಗಳನ್ನು ಕಟ್ಟಿಕೊಂಡು ಅಲ್ಲಿ ವಾಸ ಮಾಡುತ್ತಿದ್ದರು. ಅವರೆಲ್ಲರೂ ಸಣ್ಣ ಪಂಕ್ಕಳನ್ನು ಕಳೆದುಕೊಂಡಿದ್ದಾರೆ. ಆಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆಗಿರತಕ್ಕ ಅನಾಹುತಕ್ಕೆ ಏನಾದರೂ ಒಂದು ಪರಿಹಾರವನ್ನು ಕೊಡುವ ವ್ಯವಸ್ಥೆ ಮಾಡಬೇಕು. ಬಡವರು ಮತ್ತೆ ಏನನ್ನು ಕೇಳುವುದಿಲ್ಲ. ದೊಡ್ಡ ದೊಡ್ಡ ಕಟ್ಟಡಗಳನ್ನು ಹೊಡೆದು ಹಾಕಿದರೆ ದೊಡ್ಡವರಿಗೆ ಪರಿಹಾರ ಕೊಡುತ್ತೇವೆಂದು ಹೇಳುತ್ತೀರಿ.

ಶ್ರೀ ರಾಮಕೃಷ್ಣ ಹೆಗಡೆ.—ನಿನ್ನೆ ಅನಾಹುತ ಆಗಿರುವುದು ನಿಜ. ನಿನ್ನೆ ಅದು ಗೊತ್ತಾದ ಕ್ಷಣ ಆ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀನಿವಾಸ್‌ರವರು ಮತ್ತು ಗೃಹ ಸಚಿವರು ತಕ್ಷಣ ಅಲ್ಲಿಗೆ